# ಯುವ ಮನಸ್ಸುಗಳ ಮೇಲೆ ಸೈದ್ಧಾಂತಿಕ ಹೇರಿಕೆ

## ಖಾಸಗಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಕಲಿಸಲಾಗುತ್ತಿರುವ ಪಠ್ಯಕ್ರಮವು ಗುರುತರ ಪೂರ್ವಾಗ್ರಹ ಮತ್ತು ಲೋಪಗಳಿಂದ ಕೂಡಿದ್ದು ಸಮಸ್ಯಾತ್ಮಕವಾಗಿದೆ.

**Ali Shan Azhar**

**ಅಲಿ ಶಾನ್ ಅಜರ್**

ಅರ್ಥಪೂರ್ಣ ಶಾಲಾ ಶಿಕ್ಷಣದ ಪ್ರಾಮುಖ್ಯತೆಯನ್ನು ನಗಣ್ಯ ಮಾಡಲಾಗುವುದಿಲ್ಲ. ಇಂದು ಎಲ್ಲಾ ಬಡ ಮತ್ತು ಶ್ರೀಮಂತ ರಾಷ್ಟ್ರಗಳು ಸಮವಾಗಿ ಮೂಲಭೂತ ಶಾಲಾ ಶಿಕ್ಷಣದ ಪ್ರಯೋಜನಗಳನ್ನು ಪಡೆಯುವ ಹಕ್ಕನ್ನು ಗುರುತಿಸುತ್ತವೆ. ನಿಜ ಹೇಳಬೇಕೆಂದರೆ, ಶಾಲಾ ಶಿಕ್ಷಣವನ್ನು ಪ್ರಸ್ತುತ ನಾಗರೀಕತೆಯಲ್ಲಿ ವ್ಯಕ್ತಿ ಮತ್ತು ಸಮಾಜ ಎರಡಕ್ಕೂ ಅತ್ಯವಶ್ಯಕವೆಂದು ಪರಿಗಣಿಸಲಾಗಿದೆ. 'ಶಿಕ್ಷಣ' ಎಂಬ ಪದವು ಲ್ಯಾಟಿನ್ ಪದದಿಂದ ಪಡೆಯಲಾಗಿದ್ದು ಇದರರ್ಥ'ಹೊರ ಸೆಳೆಯುವುದು' ಎಂಬುದನ್ನು ನಾವೆಲ್ಲರೂ ಗಮನದಲ್ಲಿಟ್ಟುಕೊಳ್ಳೋಣ. ಬೌದ್ಧಿಕ ಬೆಳವಣಿಗೆ ಅಥವಾ ಬುದ್ಧಿ ಸಾಮರ್ಥ್ಯಗಳನ್ನು ಹೊರ ಸೆಳೆಯುವುದೇ ಶಿಕ್ಷಣದ ಮೂಲಸತ್ವವಾಗಿದೆ. ಆದ್ದರಿಂದ ಶಾಲಾ ಶಿಕ್ಷಣದ ಉದ್ದೇಶವು ಅವಶ್ಯಕವಾಗಿ ಮಕ್ಕಳಲ್ಲಿ ಅಡಗಿರುವ ಆಲೋಚನೆ, ತಾರ್ಕಿಕತೆ ಮತ್ತು ಅವಲೋಕನದ ಶಕ್ತಿಯನ್ನು ತರಬೇತುಗೊಳಿಸಿ ಅವರ ಬುದ್ಧಿಶಕ್ತಿಯನ್ನು ಉತ್ತೇಜಿಸುವುದಾಗಿದೆ. ಅಲ್ಲದೇ, ಶಾಲಾ ಶಿಕ್ಷಣವು ಆಧಾರ ಸ್ತಂಭವಾಗಿದ್ದು, ಇದರ ಮೇಲೆಯೇ ಕಲಿಕೆಯ ಅಥವಾ ಶಿಕ್ಷಣ ವ್ಯವಸ್ಥೆಯ ಸಂಪೂರ್ಣ ಸೌಧವು ನಿಂತಿದೆ. ಆದ್ದರಿಂದಲೇ ಅಮೇರಿಕಾದ ಹೆಸರಾಂತ ಶಿಕ್ಷಣ ತಜ್ಞರಾದ ಹೊರಿಸ್ ಮ್ಯಾನ್ (Horace Mann), "ಶಾಲೆಗಳು ಗಣರಾಜ್ಯದ ರಕ್ಷಣಾತ್ಮಕ ರೇಖೆಗಳು" ಎಂದು ಘೋಷಿಸಿದ್ದು.

ಪಾಕಿಸ್ತಾನದ ಶಾಲೆಗಳು ತಮ್ಮ ಕೆಲಸವನ್ನು ಮಾಡುತ್ತಿವೆಯೇ? ರಾಷ್ಟ್ರ ನಿರ್ಮಾಣ ಮತ್ತು ಜಾಗೃತ ನಾಗರೀಕತ್ವವನ್ನು ರೂಪಿಸುವಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುತ್ತಿವೆಯೇ? ಈಗಿನ ಶಾಲಾ ಶಿಕ್ಷಣವು ಸಮರ್ಥವಾಗಿ ಮಕ್ಕಳಲ್ಲಿನ ಕ್ರಿಯಾತ್ಮಕ ಶಕ್ತಿಯನ್ನು ಸರಿಯಾದ ದಾರಿಯಲ್ಲಿ ತಿರುಗಿಸಲು ಸಾಧ್ಯವಾಗಿದೆಯೇ? ಈ ಎಲ್ಲಾ ವಿಮರ್ಶಾತ್ಮಕ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರವನ್ನು ಪಡೆಯಲು ಪ್ರಸ್ತುತ ಪಾಕಿಸ್ತಾನದಲ್ಲಿ ಶಾಲಾಮಟ್ಟದಲ್ಲಿ ಅಳವಡಿಸಿಕೊಳ್ಳಲಾಗಿರುವ ಪಠ್ಯಕ್ರಮವನ್ನು ಕುರಿತು ಸಮೀಕ್ಷೆ ನಡೆಸುವುದು ಅತ್ಯಗತ್ಯವಾಗಿದೆ. ಈ ಕುರಿತು ಶ್ರದ್ಧೆಯಿಂದ

ನಡೆಸಲಾದ ಸಮೀಕ್ಷೆಯು ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ವಿವಿಧ ಹಂತಗಳಲ್ಲಿ ಅಳವಡಿಸಲಾದ ಪಠ್ಯಕ್ರಮ/ಪಠ್ಯಪುಸ್ತಕಗಳ ಕೆಲವು ವಿಶಾಲ ಪ್ರವೃತ್ತಿಗಳನ್ನು ಬಹಿರಂಗಪಡಿಸುತ್ತದೆ. ಆದ್ದರಿಂದ, ನೀಡಲಾಗುತ್ತಿರುವ ಶಿಕ್ಷಣದ ಗುಣಮಟ್ಟವನ್ನು ಮೌಲ್ಯಮಾಪನ ಮಾಡಲು ಈ ಪ್ರವೃತ್ತಿಗಳ ಮೇಲೆ ವಿಶೇಷ ಗಮನ ಹರಿಸಬೇಕಾದ ಅಗತ್ಯವಿದೆ.

**ಪಠ್ಯಪುಸ್ತಕಗಳ ಇಸ್ಲಾಮೀಕರಣ**

ಎಲ್ಲಾ ಹಂತಗಳಲ್ಲಿ ಶುದ್ಧ ನೈತಿಕತೆಗೆ ಬದಲಾಗಿ ಇಸ್ಲಾಮೀಯತೆ(Islamiat)ಯನ್ನು ಬೋಧಿಸುವುದಕ್ಕೆ ಒತ್ತನ್ನು ನೀಡಿರುವುದೇ ಪಾಕಿಸ್ತಾನದಲ್ಲಿನ ಮುಸ್ಲಿಂ ಮಕ್ಕಳಲ್ಲಿ ವಿಶಿಷ್ಟ ಅಸ್ಮಿತೆಯನ್ನು ಮೂಡಿಸುವ ಆಶಯದ ಸೂಚನೆ. ನಮ್ಮ ಇಸ್ಲಾಮೀಯತೆಯ ಪಠ್ಯಪುಸ್ತಕಗಳು ಮುಸ್ಲಿಮರ ನಂಬಿಕೆಗಳು, ಪ್ರಾರ್ಥನೆಯ ವಿಧಾನಗಳು, ಸಾಮಾಜಿಕ ಮತ್ತು ವಾಸ್ತವ ಜೀವನದಲ್ಲಿನ ಸಾಮ್ಯತೆಗಳನ್ನು ತಿಳಿಸುತ್ತಾ ಪ್ರಪಂಚದಾದ್ಯಂತ ವಾಸಿಸುತ್ತಿರುವ ಎಲ್ಲಾ ಮುಸ್ಲಿಮರು ಏಕ ಭ್ರಾತೃತ್ವವನ್ನು ರಚಿಸುತ್ತಾರೆ ಎಂದು ಘೋಷಿಸುತ್ತವೆ. ಇನ್ನೂ ಹೆಚ್ಚು ಆಸಕ್ತಿದಾಯಕ ವಿಷಯವೆಂದರೆ, ಹಲವಾರು ಪಠ್ಯಪುಸ್ತಕಗಳಲ್ಲಿ ಎಲ್ಲಾ ಮುಸ್ಲಿಮೇತರರು ಸಹಜವಾಗಿಯೇ (by default) ಒಂದೇ ರಾಷ್ಟ್ರವನ್ನು ರಚಿಸುತ್ತಾರೆ ಎಂದು ಪ್ರತಿಪಾದಿಸಿರುವುದು. ಈ ಇಸ್ಲಾಮೀಯ ಅಸ್ಮಿತೆಗೆ ನೀಡುವ ಪ್ರಾಮುಖ್ಯತೆಯನ್ನು ಉರ್ದು ಭಾಷೆ ಮತ್ತು ಸಮಾಜ ಅಧ್ಯಯನ ಪಠ್ಯಕ್ರಮದವರೆಗೂ ಕೊಂಡೊಯ್ಯಲಾಗಿದ್ದು, ಈ ವಿಷಯಗಳ ಪಠ್ಯಪುಸ್ತಕಗಳಲ್ಲಿ ಇಸ್ಲಾಮೀಯ ಆಚರಣೆಗಳು ಮತ್ತು ನಂಬಿಕೆಗಳ ಕುರಿತಾದ ಪಾಠಗಳು ಒಂದನೇ ತರಗತಿಯಿಂದಲೂ ಕಂಡುಬರುತ್ತವೆ.

ಮಗುವು ಮೇಲಿನ ತರಗತಿಗಳಿಗೆ ಹೋದಂತೆಲ್ಲಾ ಧಾರ್ಮಿಕ ವ್ಯಕ್ತಿತ್ವಗಳನ್ನು ಕುರಿತ ಪ್ರಬಂಧಗಳು ಪಠ್ಯಕ್ರಮವನ್ನು ಪದೇಪದೇ ಆವರಿಸುವುದರ ಮೂಲಕ ಪಠ್ಯಪುಸ್ತಕಗಳ ಇಸ್ಲಾಮೀಕರಣವು ಹೆಚ್ಚಾಗುತ್ತಾ ಹೋಗುತ್ತದೆ. ಮುಸ್ಲಿಂ ಅಸ್ಮಿತೆಗಾಗಿ ನಡೆಸಲಾದ ಈ ಹುಡುಕಾಟವು ಗಣ್ಯವರ್ಗದ ಆಂಗ್ಲ ಮಾಧ್ಯಮದ ಶಿಕ್ಷಣ ಸಂಸ್ಥೆಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಶಾಲೆಗಳಲ್ಲಿ ಎಲ್ಲಾ ಹಂತಗಳಲ್ಲಿ ಉರ್ದು ಭಾಷೆ ಮತ್ತು ಸಮಾಜ ಅಧ್ಯಯನ ವಿಷಯಗಳ ಪಠ್ಯಕ್ರಮವು ಅನಿವಾರ್ಯವಾಗಿ ಇಸ್ಲಾಮೀಕರಣಗೊಳ್ಳಲು ಕಾರಣವಾಗಿದೆ. ಈ ವಿಷಯಗಳ ಕೆಲವು ಪಠ್ಯಪುಸ್ತಕಗಳು ಎಷ್ಟರ ಮಟ್ಟಿಗೆ ಇಸ್ಲಾಮಿ ಪರಿಕಲ್ಪನೆಗಳು ಮತ್ತು ವ್ಯಕ್ತಿತ್ವಗಳನ್ನು ಪ್ರತಿನಿಧಿಸುತ್ತವೆಯೆಂದರೆ, ಅವುಗಳ ಮೊದಲಾರ್ಧವು ಯಾವುದೇ ಇಸ್ಲಾಮೀಯತೆಯ ಪಠ್ಯಪುಸ್ತಕಗಳಿಗಿಂತ ಭಿನ್ನವಾಗಿಲ್ಲ. ಮಕ್ಕಳ ನಡತೆ ಮತ್ತು ಸಾಮಾಜಿಕ-ರಾಜಕೀಯ ಅಥವಾ ಸಾಮಾಜಿಕ-ಸಾಂಸ್ಕೃತಿಕ ದೃಷ್ಟಿಕೋನಗಳನ್ನು ರೂಪಿಸಲು ಹೆಚ್ಚು ಸಮರ್ಥವಾಗಿರುವ ಸಾಮಾಜಿಕ

ಅಧ್ಯಯನದಲ್ಲಿನ ಹಲವಾರು ಅಗತ್ಯ ವಿಷಯಗಳನ್ನು ಅತಿರೇಖದ ಧಾರ್ಮಿಕ ವಿಷಯಗಳು ಅನಿವಾರ್ಯವಾಗಿ ಅಳಿಸಿಹಾಕಿವೆ. ಉದಾಹರಣೆಗೆ, ಬಹುತೇಕ ಸಮಾಜ ಅಥವಾ ಪಾಕಿಸ್ತಾನ ಅಧ್ಯಯನದ ಪಠ್ಯಪುಸ್ತಕಗಳಲ್ಲಿ ಭೂಗೋಳ, ಇತಿಹಾಸ, ಸಂಸ್ಕೃತಿ, ಆರ್ಥಿಕ ವ್ಯವಸ್ಥೆ ಮತ್ತು ಸಮಾಜ ಮುಂತಾದ ಉಪಯುಕ್ತ ವಿಷಯಗಳಿಗೆ ಅಗತ್ಯ ಸ್ಥಳಾವಕಾಶವೇ ಕಂಡುಬರುವುದಿಲ್ಲ.

ಇಸ್ಲಾಮಿಯತ್ ಮತ್ತು ಉರ್ದು ಭಾಷಾ ಪಠ್ಯಪುಸ್ತಕಗಳಲ್ಲಿ ಈಗಾಗಲೇ ಬೇಸರ ಹುಟ್ಟಿಸುವಷ್ಟು (ad nauseum) ಪುನರಾವರ್ತಿಸಲಾಗಿರುವ ಧಾರ್ಮಿಕ ಪಾಠಗಳಿಗೆ ಅವಕಾಶ ಮಾಡಿಕೊಡಲು ಉದ್ದೇಶಪೂರ್ವಕವಾಗಿ ಈ ಹಾನಿಯನ್ನುಂಟುಮಾಡಲಾಗುತ್ತಿದೆ ಎನ್ನುವ ವಿಷಾದಕರ ಅರಿವು ಗಾಯದ ಮೇಲೆ ಉಪ್ಪುಸುರಿದಂತಾಗಿದೆ. ಉರ್ದು ಭಾಷೆಯಲ್ಲಿ ಪಾಠ ಮಾಡುವುದರ ಪರಿಣಾಮವೂ ಸಹಾ ಶ್ಲಾಘನೀಯವೇನಲ್ಲ. ನಿರ್ದಿಷ್ಟ ಹಂತದ ಶಬ್ದಕೋಶವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರ ವಿಶ್ಲೇಷಣೆ ಮಾಡುವುದಕ್ಕೆ ಸಾಧ್ಯವಾಗುವಂತೆ ಮಾಡುವುದರ ಬಗ್ಗೆ ಶಾಲಾ ಪಠ್ಯಪುಸ್ತಕಗಳು ಒತ್ತುನೀಡಬೇಕು. ಆದರೆ ಬಹಳಷ್ಟು ಸಂದರ್ಭಗಳಲ್ಲಿ ಭಾಷೆಯು ಧಾರ್ಮಿಕ ಬೋಧನೆಗೆ ಅಡಿಯಾಳಾದಂತೆ ಕಾಣುತ್ತದೆ. ಇದರ ಪರಿಣಾಮವಾಗಿ ಮಕ್ಕಳು ನಿಜವಾದ ಭಾಷಾ ಕಲಿಕೆಯ ಅವಕಾಶವನ್ನು ಕಳೆದುಕೊಂಡಿದ್ದು, ಹತ್ತು ವರ್ಷಗಳ ಕಾಲ ಉರ್ದು ಭಾಷೆಯನ್ನು ಶಾಲೆಯಲ್ಲಿ ಕಲಿತರೂ ಅತ್ಯಂತ ಕಳಪೆಯಾಗಿರುವ ಅವರ ಭಾಷಾ ಕೌಶಲ್ಯವೇ ಇದಕ್ಕೆ ಸಾಕ್ಷಿ. ಭಾಷಾ ಕೌಶಲ್ಯವನ್ನು ಉತ್ತಮಪಡಿಸುವಲ್ಲಿ ಹೆಚ್ಚು ಪ್ರಯೋಜನಕಾರಿಯಾಗಿರದ ಧಾರ್ಮಿಕ ಪ್ರಬಂಧಗಳಿಗೆ ಅವಕಾಶ ಮಾಡಿಕೊಡುವ ಸಲುವಾಗಿ ಗದ್ಯ ಮತ್ತು ಪದ್ಯಗಳ ಸಾಹಿತ್ಯದ ಭಾಗಗಳನ್ನು 'ಹೊರ ತಳ್ಳಿರುವುದೇ' ಇದಕ್ಕೆಲ್ಲ ಕಾರಣ ಎಂಬುದು ಕೆಲವು ಶಿಕ್ಷಣತಜ್ಞರ ಅಭಿಪ್ರಾಯ.

**ಇಸ್ಲಾಮಿಕ್ ರಾಜ್ಯವಾಗಿ ಪಾಕಿಸ್ತಾನ**

ಮೂಲತಃ ಈ ದೇಶವು ಇಸ್ಲಾಮಿಕ್ ರಾಷ್ಟ್ರವೆಂದೇ ಕಲ್ಪಿತವಾಗಿತ್ತು ಎಂಬುದನ್ನು ಸಾಬೀತು ಮಾಡಲು ಸಾಮಾಜಿಕ / ಪಾಕಿಸ್ತಾನ ಅಧ್ಯಯನಗಳ ಪಠ್ಯಕ್ರಮವು ನೇರವಾಗಿ ಪಾಕಿಸ್ತಾನದ ಸಂಸ್ಥಾಪಕ ಕ್ವಾಯಿದ್-ಎ-ಆಜಮ್ ಮಹಮ್ಮದ್ ಅಲಿ ಜಿನ್ನಾ (Quaid-e-Azam Muhammad Ali Jinnah) ಅವರ ಈ ಮಾತುಗಳನ್ನು ಅಕ್ಷರಶಃ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತದೆ: "ನೀನು ಎಲ್ಲೇ ಇದ್ದರು ಮತ್ತು ಏನೇ ಮಾಡುತ್ತಿದ್ದರೂ ನೀನು ಎಂದಿಗೂ ಮೊದಲಿಗೆ ಮುಸ್ಲಿಂ. ಈ ಭೂಮಿ

ಪಂಜಾಬಿ, ಸಿಂಧಿ, ಪಠಾಣ್ ಅಥವಾ ಬಂಗಾಳಿಗಳಿಗೆ ಸೇರಿದ್ದಲ್ಲ.'' ಆದ್ದರಿಂದ ಕ್ವಾಯಿದ್‍ರವರು ಪಾಕಿಸ್ತಾನದ ಮೂಲ ನಿವಾಸಿಗಳು ಮುಸ್ಲಿಮರಾಗಿರಬೇಕು ಹಾಗೂ ಈ ಆಧಾರದ ಮೇಲೆ ಪ್ರಾಂತೀಯತೆಯನ್ನು ಬಿಡಬೇಕೆಂದು ಇಚ್ಛೆಪಟ್ಟಿದ್ದರು. (ಪಾಕಿಸ್ತಾನೀಯರು ಎಂಬ ಕಾರಣದಿಂದಲ್ಲ?) ''ನಮ್ಮಲ್ಲಿ ಪ್ರತಿಯೊಬ್ಬರೂ ಪಾಕಿಸ್ತಾನಿಯಂತೆ ಯೋಚಿಸಬೇಕು, ಭಾವಿಸಬೇಕು ಮತ್ತು ವರ್ತಿಸಬೇಕು; ಹಾಗೂ ಪಾಕಿಸ್ತಾನಿ ಮಾತ್ರವೇ ಆಗಿರುವುದಕ್ಕೆ ಹೆಮ್ಮೆ ಪಡಬೇಕು,'' ಎಂಬ ಕ್ವಾಯಿದ್‍ರವರ ಪ್ರತಿಪಾದನೆ ಕೇವಲ ಗಣ್ಯ ಇಂಗ್ಲಿಷ್ ಮಾಧ್ಯಮ ಶಾಲೆಗಳ ಒ' ಲೆವೆಲ್ (ಪ್ರೌಢ ಶಾಲಾ ಹಂತದ ಸಾಮಾನ್ಯ ಅರ್ಹತೆ) ಪಠ್ಯಪುಸ್ತಕಗಳಲ್ಲಿ ಮಾತ್ರವೇ ಕಂಡುಬರುತ್ತದೆ.

ಆದಾಗ್ಯೂ, ''ನಾವು ಮುಸ್ಲಿಮರು ಮತ್ತು ಒಬ್ಬನೇ ದೇವರು, ಒಬ್ಬನೇ ಪ್ರವಾದಿ(PBUH- Peace Be Upon Him (ಪಿಬಿಯುಹೆಚ್ – ಇದು ಮೂಲತಃ ಅರೆಬ್ಬಿಕ್ ನುಡಿಗಟ್ಟಾಗಿದ್ದು 'ದೇವರು ನಿಮ್ಮನ್ನು ಆಶೀರ್ವಾದಿಸುತ್ತಾನೆ' ಎನ್ನುವ ಅಭಿನಂದನಾ ನುಡಿಗಟ್ಟನ್ನು ಪ್ರವಾದಿಗಳ ಹೆಸರಿಗೆ ಪೂರಕವಾಗಿ ಸೇರಿಸಲಾಗುತ್ತದೆ)) ಮತ್ತು ಒಂದೇ ಗ್ರಂಥದಲ್ಲಿ ನಂಬಿಕೆಯುಳ್ಳವರು; ಆದ್ದರಿಂದ ನಾವೆಲ್ಲರೂ ಒಂದು ರಾಷ್ಟ್ರವಾಗಿ ಕೂಡ ಬದ್ಧರಾಗಿರುವುದು ಅಗತ್ಯ'' ಎಂಬ ಕ್ವಾಯಿದ್‍ರವರ ಮತ್ತೊಂದು ಅತ್ಯಂತ ಇಬ್ಬಗೆಯ ಹೇಳಿಕೆ ಹಲವಾರು ಪಠ್ಯಪುಸ್ತಕಗಳಲ್ಲಿ ಸ್ಥಾನ ಪಡೆದಿದೆ. ಆದ್ದರಿಂದ ನಮ್ಮ ನೀತಿ–ರಚನಾಕಾರರು ಮತಧರ್ಮದ ಮನೋಭಿವೃತ್ತಿಯನ್ನು ಉತ್ತೇಜಿಸಲು ಉದ್ದೇಶಪೂರ್ವಕವಾಗಿ ದೇಶದ ಸಂಸ್ಥಾಪಕರು ಹೇಳಿದ್ದನ್ನು ತಪ್ಪಾಗಿ ಉಲ್ಲೇಖಿಸಲು ಹಿಂಜರಿಯುವುದಿಲ್ಲ ಎಂಬುದು ಸ್ಪಷ್ಟ. ಹಲವಾರು ಪಠ್ಯಪುಸ್ತಕಗಳು ಪಾಕಿಸ್ತಾನವನ್ನು ''ಇಸ್ಲಾಂನ ಕೋಟೆ'' ಮತ್ತು ಎಲ್ಲಾ ಪ್ರಯತ್ನಗಳ ಉದ್ದೇಶವೂ ಇದನ್ನು ''ಇಸ್ಲಾಮೀಯ ಕಲ್ಯಾಣ ರಾಜ್ಯ'' ವಾಗಿಸುವುದಾಗಿರಬೇಕೆಂದು ಪ್ರತಿಪಾದಿಸುತ್ತವೆ. ಪಾಕಿಸ್ತಾನದ ಅಸ್ತಿತ್ವದ ಮೂಲಭೂತ ಆಧಾರವೆನ್ನುವ ಅತ್ಯಂತ ಪ್ರಶ್ನಾರ್ಹವಾದ ತರ್ಕವನ್ನು ಹೀಗೆ ಉದ್ದೇಶಪೂರ್ವಕವಾಗಿ ಪ್ರಚಾರ ಮಾಡುವುದು ಮುಂದಿನ ಪೀಳಿಗೆಗಳಲ್ಲಿ ಜವಾಬ್ದಾರಿಯುತ ನಾಗರೀಕತ್ವವನ್ನು ಅಥವಾ ಪೌರತ್ವವನ್ನು ಬೆಳೆಸಲು ಖಂಡಿತವಾಗಿಯೂ ಸಹಕಾರಿಯಲ್ಲವಷ್ಟೆ ಅಲ್ಲ ಅವರ ಮುಂದಿನ ಜೀವಮಾನವಿಡೀ ಐತಿಹಾಸಿಕ ಘಟನೆಗಳು ಅಥವಾ ವ್ಯಕ್ತಿಗಳ ಬಗೆಗಿನ ದೃಷ್ಟಿಕೋನವನ್ನು ಸಹಾ ಇದು ವಿರೂಪಗೊಳಿಸುತ್ತದೆ.

ಮಕ್ಕಳಿಗೆ ತಮ್ಮ ಸುತ್ತಲಿನ ಪ್ರಪಂಚವನ್ನು ಅತ್ಯಂತ ಸರಳವಾಗಿ, ಆಸಕ್ತಿಕರವಾಗಿ ವರ್ಗೀಕೃತ ರೀತಿಯಲ್ಲಿ ವಿವರಿಸುವ ಅಮೂಲ್ಯವಾದ ಮಹತ್ವದ ಶಿಸ್ತಾಗಿರುವ ಸಮಾಜ ಅಧ್ಯಯನವನ್ನು ಇಸ್ಲಾಮೀಕರಣಗೊಳಿಸುವ ಇಂತಹ ಪ್ರಯತ್ನಗಳು ಕಲಿಕೆಯ ವಿಷಯವನ್ನು ಪರಿಣಾಮಕಾರಿಯಾಗಿ ಅನುಪಯುಕ್ತಗೊಳಿಸಿವೆ. ಈ ಅಧ್ಯಯನ ಶಿಸ್ತು ಅವರಿಗೆ ವಿಶ್ವದ ಮತ್ತು ತಮ್ಮ ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕತೆಯ ಆಗುಹೋಗುಗಳ ಬಗ್ಗೆ ಒಂದು ಕಿರು ನೋಟವನ್ನು ಒದಗಿಸುತ್ತದೆ. ಮೇಲಿನ ಅಂಶಗಳೆಲ್ಲವೂ ಮಕ್ಕಳು ತಾವೇ ಸ್ವತಃ ಆಲೋಚನೆ ಮಾಡಬಲ್ಲ ಮತ್ತು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಸಾಮರ್ಥ್ಯವನ್ನು ಹೊಂದಿರುವ ಪ್ರೌಢರಾಗಿ ಬೆಳೆಯಲು ಅನುಕೂಲ ಮಾಡಿಕೊಡುತ್ತವೆ. ಈ ರೀತಿ ಮತಧರ್ಮದ ಅತಿಯಾದ ಹೇರುವಿಕೆ ಮತ್ತು ಸತ್ಯಾಭಾಸದ ಇತಿಹಾಸವು ಸಮಾಜ ಅಧ್ಯಯನದ ಚೌಕಟ್ಟನ್ನು ಪ್ರಗತಿಪರ, ಆಧುನಿಕ ಮತ್ತು ಉದಾರವಾದಿ ಎಂಬುದಕ್ಕೆ ಬದಲಾಗಿ ಪ್ರಶ್ನಾತೀತ ಸಮರ್ಥನೆಗಳು ಮತ್ತು ಕಠಿಣ ನಿಷೇಧಗಳನ್ನು ಹೊಂದಿರುವ ವಿಷಯವಾಗಿ ಪರಿವರ್ತಿಸುತ್ತದೆಯಷ್ಟೆ. ನೈಜ ಶಿಕ್ಷಣದ ಉದ್ದೇಶಕ್ಕೆ ಸಂಪೂರ್ಣ ವಿರುದ್ಧವಾಗಿ ಶಾಲಾ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಲ್ಲಿ ಹೆಚ್ಚು ಚರ್ಚಾಸ್ಪದ ವಿಚಾರಗಳನ್ನು ನಿರ್ಲಕ್ಷಿಸುವ ಪ್ರವೃತ್ತಿಯನ್ನು ಉತ್ತೇಜಿಸುವಂತೆ ಕಾಣುತ್ತದೆ.

**ಮುಸ್ಲಿಮೇತರರೊಂದಿಗೆ ಸಂಬಂಧ**

ಪಾಕಿಸ್ತಾನವು ಇಸ್ಲಾಮಿಕ್ ರಾಷ್ಟ್ರವೆಂಬ ಚರ್ಚಾಸ್ಪದ ಪ್ರಮೇಯವನ್ನು ಒಪ್ಪಿಕೊಂಡರೂ ಸಹಾ ಅದರರ್ಥ ಮುಸ್ಲಿಮೇತರರು ಪಾಕಿಸ್ತಾನದಲ್ಲಿ ನೆಮ್ಮದಿಯ ಜೀವನ ನಡೆಸಲು ಸಾಧ್ಯವಿಲ್ಲವೆನ್ನುವುದನ್ನು ಒಪ್ಪಿಕೊಳ್ಳಬೇಕೆಂದಾಗಲಿ ಅಥವಾ ಅಂತಹ ಧೋರಣೆಯನ್ನು ಸಹಿಸಿಕೊಳ್ಳಬೇಕೆಂದಾಗಲಿ ಅಲ್ಲ. ಶಾಲಾ ಪಠ್ಯಪುಸ್ತಕಗಳು ಮುಸ್ಲಿಮೇತರರೊಂದಿಗಿನ ಸಂಬಂಧಗಳ ಬಗ್ಗೆ ಸೂಕ್ತ ಇಸ್ಲಾಮಿಕ್ ಬೋಧನೆಗಳನ್ನು ಸ್ಪಷ್ಟವಾಗಿ ಯುವ ಮನಸ್ಸುಗಳಿಗೆ ತಲುಪಿಸಬೇಕು ಎನ್ನುವುದನ್ನು ನಿರೀಕ್ಷಿಸುವುದು ಹೆಚ್ಚೇನಲ್ಲ. ಆದಾಗ್ಯೂ, ಆಸಕ್ತಿಕರವಾದ ವಿಷಯವೇನೆಂದರೆ, ಗಣ್ಯ ಆಂಗ್ಲ ಮಾಧ್ಯಮ ಶಾಲೆಗಳಿಗೆಂದೇ ಇರುವ ಇಸ್ಲಾಮಿಯತ್ ಪಠ್ಯಪುಸ್ತಕಗಳು ಮಾತ್ರ ಮುಸ್ಲೀಮೇತರರೊಂದಿಗಿನ ಸಂಬಂಧಗಳ ಬಗ್ಗೆ ಇಸ್ಲಾಮಿಕ್ ಬೋಧನೆಗಳಲ್ಲಿರುವ ನಿಜವಾದ ಅರ್ಥವನ್ನು ತಿಳಿಸುವಂತೆ ಕಾಣುತ್ತವೆ. ಉದಾಹರಣೆಗೆ, ಪವಿತ್ರ ಪ್ರವಾದಿಗಳು (ಪಿಬಿಯುಹೆಚ್) ಮುಸ್ಲಿಮೇತರರಿಗೆ ನೀಡಿದ ಆತಿಥ್ಯದ ಘಟನೆಗಳು ಅಥವಾ ಇಸ್ಲಾಮಿಕ್ ರಾಜ್ಯವಾದ ಮದೀನಾದಲ್ಲಿ ಮುಸ್ಲಿಮೇತರರು ತಮ್ಮ ಧರ್ಮವನ್ನು ಪಾಲಿಸಲು ಹಾಗೂ

ಅವರ ಪ್ರಾಣ ಮತ್ತು ಆಸ್ತಿ–ಪಾಸ್ತಿಗಳಿಗೆ ಸಂಪೂರ್ಣ ಭದ್ರತೆಯಿದೆ ಎಂದು ಭರವಸೆ ನೀಡಿರುವ ಸಂಗತಿಗಳನ್ನು ಇವು ಎತ್ತಿತೋರಿಸುತ್ತವೆ.

ಇಸ್ಲಾಮಿಕ್ ರಾಜ್ಯದ ರಕ್ಷಣೆಯಲ್ಲಿ ನೆಮ್ಮದಿ ಮತ್ತು ಶಾಂತಿಯಿಂದ ಜೀವನ ನಡೆಸುತ್ತಿದ್ದ ಕಾರಣದಿಂದ ಮುಸ್ಲಿಮೇತರರನ್ನು 'ಜಿಮ್ಮಿಗಳು(Zimmies)' (ಸಂರಕ್ಷಿತ ಜನ) ಎಂದು ಕರೆಯಲಾಗುತ್ತಿತ್ತು. ಮುಸ್ಲಿಮೇತರರ ಹಕ್ಕುಗಳನ್ನು ರಕ್ಷಿಸಲು ಒಂದು ಇಸ್ಲಾಮಿಕ್ ರಾಜ್ಯವು, ಇಸ್ಲಾಮಿನ ಬೋಧನೆಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿರುವ ಆಚರಣೆಗಳನ್ನು ಸಹಾ ಅನುಸರಿಸಲು ಅವರಿಗೆ ಸ್ವಾತಂತ್ರ್ಯವನ್ನು ನೀಡುವಂತಹ ತೀವ್ರ ಮಟ್ಟಕ್ಕೂ ಹೋಗಿದೆ. ಉದಾಹರಣೆಗೆ, ಪಾಕಿಸ್ತಾನದಲ್ಲಿ ಮುಸ್ಲಿಮರಿಗೆ ಮದ್ಯ ಸೇವನೆ ನಿಷಿದ್ಧ; ಆದರೂ, ಸರ್ಕಾರವೇ ಮುಸ್ಲಿಮೇತರರಿಗೆ ಮದ್ಯಪಾನದ ಪರವಾನಗಿಗಳನ್ನು ನೀಡುತ್ತದೆ. ಇಂತಹಾ ಸತ್ಯ ಸಂಗತಿಗಳು ಮತ್ತು ಧಾರ್ಮಿಕ ಬೋಧನೆಗಳನ್ನು ಗಣ್ಯ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಹೊರತುಪಡಿಸಿ ಬಹುತೇಕ ಇತರೆ ಎಲ್ಲಾ ಇಸ್ಲಾಮಿಯತ್ ಪಠ್ಯಕ್ರಮದಿಂದ ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ. ಕೆಲವು ಇಸ್ಲಾಮಿಯತ್ ಪಠ್ಯಪುಸ್ತಕಗಳಂತೂ ಮುಸ್ಲಿಮೇತರರನ್ನು 'ಕಾಫಿರ್' (ನಾಸ್ತಿಕರು) ಎಂದು ಹಣೆಪಟ್ಟಿ ಹಚ್ಚುವ ಮಟ್ಟಕ್ಕೂ ಹೋಗಿವೆ. ಹಾಗೆಯೇ ಧಾರ್ಮಿಕ ಅಸಹಿಷ್ಣುತೆಗೆ ಕ್ವಾಯಿದ್‌ರವರ ವಿರೋಧವು ಪಾಕಿಸ್ತಾನದ ಎಲ್ಲಾ ಶಾಲಾ ಪಠ್ಯಕ್ರಮದಿಂದ ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ.

**ರಾಷ್ಟ್ರೀಯ ಭಾವೈಕ್ಯತೆ**

ಪಠ್ಯಕ್ರಮದಲ್ಲಿ ಕಲ್ಪಿತ ಮುಸ್ಲಿಂ ಅಸ್ಮಿತೆ ಮತ್ತು ಇಸ್ಲಾಮಿಕ್ ಗುರುತಿಸುವಿಕೆಯನ್ನು ಸೇರಿಸುವ ಪ್ರಯತ್ನವು ಪಾಕಿಸ್ತಾನೀಯರಿಗೆ ಒಂದು ರಾಷ್ಟ್ರೀಯ ಗುರುತನ್ನು ನೀಡುವ ಕಾರ್ಯವನ್ನೇ ಮಸುಕಾಗಿಸಿದೆ. ಇಂದಿನ ಪರಿಸ್ಥಿತಿಯಲ್ಲಿ ಪಠ್ಯಕ್ರಮವು ಮಾಡಬಹುದಾದ ಕನಿಷ್ಟ ಕಾರ್ಯವೆಂದರೆ, ರಾಷ್ಟ್ರೀಯ ಭಾವೈಕ್ಯತೆಯ ಪ್ರಕ್ರಿಯೆಯನ್ನು ಉತ್ತೇಜಿಸಲು ನಾಲ್ಕೂ ಪ್ರಾಂತ್ಯಗಳಲ್ಲಿನ ಜನರು ಪರಸ್ಪರ ಉತ್ತಮವಾಗಿ ಅರ್ಥಮಾಡಿಕೊಳ್ಳುವುದನ್ನು ಪ್ರೋತ್ಸಾಹಿಸುವುದು. ಆದರೆ ಈ ಕಾರ್ಯವನ್ನು ಪಠ್ಯಕ್ರಮವು ಎಷ್ಟರ ಮಟ್ಟಿಗೆ ಸಾಧಿಸಿದೆ? ಪಂಜಾಬ್ ಪಠ್ಯಪುಸ್ತಕ ಮಂಡಳಿಯ ೮ನೇ ತರಗತಿ ಉರ್ದು ಭಾಷೆಯ ಪಠ್ಯಪುಸ್ತಕವು ಪಂಜಾಬಿ ಭಾಷೆಯಲ್ಲಿ ತಯಾರಿಸಲಾದ ಪಾಕಿಸ್ತಾನಿ ಸಾಹಿತ್ಯವನ್ನು ಮಾತ್ರ ಹೇಳುತ್ತದೆ. ಅಂತೆಯೇ, 4ನೇ

ತರಗತಿಯ ಸಮಾಜ ಅಧ್ಯಯನ ಪಠ್ಯಪುಸ್ತಕವು ಪಂಜಾಬ್ ಪ್ರಾಂತ್ಯವನ್ನು ಹೊರತುಪಡಿಸಿ ಇತರೆ ಎಲ್ಲಾ ಪ್ರಾಂತ್ಯಗಳ ಭೌಗೋಳಿಕ ವಿವರ ಮತ್ತು ಚರಿತ್ರೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಆದ್ದರಿಂದ, ೯ನೇ ತರಗತಿಗೆ ಬಂದಾಗ ಮಾತ್ರವೇ ಸರ್ಕಾರಿ ಶಾಲೆಗಳ ಮಕ್ಕಳು ತಮ್ಮ ದೇಶದ  ಸಂಸ್ಕೃತಿಯ ಬಗ್ಗೆ ವ್ಯವಸ್ಥಿತವಾಗಿ ಮತ್ತು ಸಮಗ್ರವಾಗಿ ಕಲಿಯುತ್ತಾರೆ. ಮತ್ತು, ಬಹುತೇಕ ಪಠ್ಯಪುಸ್ತಕಗಳಲ್ಲಿ ಸಂಸ್ಕೃತಿಯ ಜೊತೆಗೆ ದೇಶದ ಭೌಗೋಳಿಕ ಮತ್ತು ಆರ್ಥಿಕ ವಿವರಗಳೂ ಕಂಡುಬರುವುದಿಲ್ಲ.

ಪಾಕಿಸ್ತಾನದ ಅಸ್ತಿತ್ವವನ್ನು ಗ್ರಹಿಸುವ ಸೌಭಾಗ್ಯವು ಕೇವಲ ಗಣ್ಯ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಶಿಕ್ಷಣವನ್ನು ಪಡೆಯುವ ಅದೃಷ್ಟವಂತರಿಗೆ ಮಾತ್ರ ಸೀಮಿತವಾದಂತೆ ಕಾಣುತ್ತದೆ. ಉದಾಹರಣೆಗೆ, ಒ'ಲೆವೆಲ್ ಪಠ್ಯಪುಸ್ತಕಗಳು ಇಡೀ ದೇಶದ ಭೌಗೋಳಿಕ ಮತ್ತು ಆರ್ಥಿಕ ವಿವರಗಳು ಅಂದರೆ, ಹವಾಗುಣ, ಕೃಷಿ, ಕೈಗಾರಿಕೆ, ಸಂಪರ್ಕ ಸಾಧನಗಳು, ನೈಸರ್ಗಿಕ ಸಂಪನ್ಮೂಲಗಳು, ಉದ್ಯೋಗ ಮುಂತಾದ ವಿವರಗಳನ್ನು ನೀಡುತ್ತವೆ. ಸಾಂಸ್ಕೃತಿಕ ಅಸ್ಮಿತೆಗಾಗಿ ನಡೆದ ಹೋರಾಟವೆಂದು ಹೆಸರಿಸಲಾದ ಒಂದು ಪಾಠವೇ ಇದ್ದು, ಅದರಲ್ಲಿ ಪಾಕಿಸ್ತಾನದ ರಾಷ್ಟ್ರೀಯ ಭಾಷೆಯಾದ ಉರ್ದು ಮತ್ತು ಹಲವಾರು ಪ್ರಾಂತೀಯ ಭಾಷೆಗಳ ಇತಿಹಾಸ ಮತ್ತು ಬೆಳವಣಿಗೆಯನ್ನು ಸೇರಿಸಲಾಗಿದೆ. ಅಂತೆಯೇ, ಗಣ್ಯ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಬೋಧಿಸಲಾಗುವ ಉರ್ದು ಭಾಷೆ ಮತ್ತು ಸಮಾಜ ಅಧ್ಯಯನ ಪಠ್ಯಪುಸ್ತಕಗಳು ಇತರೆ ಪ್ರಾಂತ್ಯಗಳಲ್ಲಿನ ಪ್ರಸಿದ್ಧ ವ್ಯಕ್ತಿಗಳ ಜೀವನ ಮತ್ತು ಅವರ ಕೃತಿಗಳನ್ನು ವಿವರಿಸುತ್ತವೆ. ಉದಾಹರಣೆಗೆ, ಪಷ್ಟೋ ಕವಿ ರೆಹೆಮಾನ್ ಬಾಬಾ (Rehman Baba) ಮತ್ತು ಸಿಂಧಿ ಕವಿ ಅಬ್ದುಲ್ ಮಾಜೀದ್ (Abdul Majid) ರನ್ನು ಕುರಿತ ಪ್ರಬಂಧಗಳನ್ನು ಪಂಜಾಬಿನ ಗಣ್ಯ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಬೋಧಿಸಲಾಗುವ ಪಠ್ಯಕ್ರಮದಲ್ಲಿ ಸೇರಿಸಲಾಗಿದೆ. ಎಲ್ಲಾ ಪ್ರಾಂತ್ಯಗಳ ಸಂಸ್ಕೃತಿ, ಜೀವನಶೈಲಿ ಮತ್ತು ಪ್ರಸಿದ್ಧ ಸ್ಥಳಗಳನ್ನೂ ಸಹಾ ಈ ಶಾಲೆಗಳ ಪಠ್ಯಕ್ರಮದಲ್ಲಿ ಸಮರ್ಪಕವಾಗಿ ಸೇರಿಸಲಾಗಿದೆ.

## ಪ್ರಜಾಪ್ರಭುತ್ವದ ಮೌಲ್ಯಗಳು

ಬಹುತೇಕ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ವ್ಯವಸ್ಥೆಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ.  ಆದಾಗ್ಯೂ, ಪಂಜಾಬ್ ಪಠ್ಯಪುಸ್ತಕ ಮಂಡಳಿಯ

10ನೇ ತರಗತಿಯ ಪಾಕಿಸ್ತಾನ ಅಧ್ಯಯನದ ಪಠ್ಯಪುಸ್ತಕದಲ್ಲಿ, "ಸಂವಿಧಾನದ ಅಂತಿಮ ರೂಪವು ಮೂಲಭೂತ ಇಸ್ಲಾಮಿಕ್ ತತ್ವಗಳನ್ನು ಆಧರಿಸಿರುತ್ತದೆ. ಹಾಗೂ ಪ್ರಜಾಸತ್ತಾತ್ಮಕವಾಗಿರುತ್ತದೆ ಎಂದು ನಾನು ನಂಬುತ್ತೇನೆ" ಎಂಬ ಕ್ವಾಯಿದ್-ಎ-ಅಜಮ್‌ರವರ ಈ ಉಲ್ಲೇಖವನ್ನು ಕಾಣಬಹುದು. ಇದನ್ನು ಹೊರತುಪಡಿಸಿ, ಗಣ್ಯ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಬೋಧಿಸಲಾಗುವ ಪಠ್ಯಕ್ರಮವೂ ಸೇರಿದಂತೆ ಸಂಸದೀಯ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಅರ್ಥ ಮತ್ತು ಕಾರ್ಯಗಳ ಬಗ್ಗೆ ಅತ್ಯಲ್ಪ ವಿವರವೂ ಸಹಾ ಕಂಡುಬರುವುದು ವಿರಳ. ಅಂತಯೇ, ಸಂಯುಕ್ತ ರಾಜ್ಯ ವ್ಯವಸ್ಥೆಯ ಸರ್ಕಾರ ಮತ್ತು ಅದರ ಪೂರ್ವಾವಶ್ಯಕತೆಗಳನ್ನು ಕುರಿತ ವಿವರಗಳೂ ಸಹಾ ಅಷ್ಟೇ ವಿರಳವಾಗಿವೆ.

ಅದೇ ರೀತಿ, ಸಾರ್ವತ್ರಿಕ ಮಾನವ ಹಕ್ಕುಗಳ ಪರಿಕಲ್ಪನೆಯು ಇಂದಿಗೂ ಸಹಾ ನಮ್ಮ ಶಾಲಾ ಪಠ್ಯಕ್ರಮದಲ್ಲಿ ಕಂಡುಬರುವುದಿಲ್ಲ. ಹಾಗೂ ಅದರ ಪರಿಣಾಮವಾಗಿ, ಮೂಲಭೂತ ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ, ವರ್ಗದ ದೃಷ್ಟಿಕೋನ ಮತ್ತು ಸಾಮಾಜಿಕ ರಾಜಕೀಯ ಬೇಡಿಕೆಗಳೂ ಸಹಾ ಮುಖ್ಯವೆಂದು ಪರಿಗಣಿಸುವುದಾಗಿ ಕಂಡುಬಂದಿಲ್ಲ, ಬದಲಾಗಿ ಕಾಣುತ್ತಿರುವುದೇನೆಂದರೆ, ಪಾಕಿಸ್ತಾನದಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಪ್ರಜಾಪ್ರಭುತ್ವದ ಪ್ರಕ್ರಿಯೆಯನ್ನು ಪದೇಪದೇ ಬುಡಮೇಲು ಮಾಡುತ್ತಿರುವ ಸಂಸ್ಥೆಯೆಂದು ವ್ಯಾಪಕವಾಗಿ ಗುರುತಿಸಿಕೊಂಡಿರುವ ಸೇನಾಡಳಿತದ ಅತಿಯಾದ ಪ್ರಶಂಸೆ ಮತ್ತು ಪ್ರಜಾಪ್ರಭುತ್ವದ ಅವಹೇಳನ. ಈ ಕಾರ್ಯದಲ್ಲಿ ಉರ್ದು ಭಾಷಾ ಪಠ್ಯಪುಸ್ತಕಗಳಂತೂ ಪಾಕಿಸ್ತಾನ/ಸಮಾಜ ಅಧ್ಯಯನ ಪಠ್ಯಪುಸ್ತಕಗಳಿಗೆ ಅಪಾರವಾಗಿ ಸಹಕರಿಸುತ್ತಿವೆ. ಸರ್ಕಾರಿ ಶಾಲೆಗಳ ೭ ಮತ್ತು ೮ನೇ ತರಗತಿಯ ಉರ್ದು ಭಾಷಾ ಪಠ್ಯಪುಸ್ತಕಗಳಲ್ಲಿ ಭಾರತದೊಂದಿಗೆ ಯುದ್ಧದಲ್ಲಿ ಮಡಿದು ಹುತಾತ್ಮರಾದವರು ಮತ್ತು ಸೇನಾ ಗೌರವ ಪದಕಗಳಾದ ನಿಶಾನ್-ಎ-ಹೈದರ್ (Nishan-e-Haider) ಮುಂತಾದ ಬಿರುದುಗಳಿಂದ ಪುರಸ್ಕೃತರಾದವರ ವಿಚಾರಗಳು ಅತ್ಯಂತ ಪ್ರಿಯವಾದ ಚರ್ಚೆಯ ವಿಷಯಗಳಾಗಿವೆ.

ಪಾಕಿಸ್ತಾನದ ಇತಿಹಾಸದಲ್ಲಿ ಪದೇಪದೇ ಉಂಟಾಗಿರುವ ಸೇನಾ ಹಸ್ತಕ್ಷೇಪದ ಪ್ರಾಮುಖ್ಯತೆಯನ್ನು ಕಡಿಮೆ ಮಾಡುವ ಸಲುವಾಗಿ ಎಲ್ಲಾ ಪಠ್ಯಪುಸ್ತಕಗಳು ರಾಷ್ಟ್ರೀಯ ಇತಿಹಾಸದ ಇತ್ತೀಚಿನ ಘಟನೆಗಳನ್ನು ಕಡೆಗಣಿಸಿವೆ. ಅದರಲ್ಲೂ ಪಂಜಾಬ್/ಎನ್ ಡಬ್ಲ್ಯು ಎಫ್ ಪಿ

(NWFP (North Western Frontier Province- ವಾಯುವ್ಯ ಗಡಿನಾಡು ಪ್ರಾಂತ್ಯ) ಪಠ್ಯಪುಸ್ತಕ ಮಂಡಳಿಯ 10ನೇ ತರಗತಿಯ ಪಾಕಿಸ್ತಾನ ಅಧ್ಯಯನ ಪುಠ್ಯಪುಸ್ತಕಗಳಲ್ಲಂತೂ 1973ರಲ್ಲಿ ಸಂವಿಧಾನದ ಘೋಷಣೆಯ ನಂತರದ ರಾಷ್ಟ್ರೀಯ ಇತಿಹಾಸವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಹೀಗೆ ದೇಶದ ಇತಿಹಾಸಕ್ಕೆ ಸಂಬಂಧಿಸಿದ ಹೆಚ್ಚಿನ ಭಾಗಗಳನ್ನು ವಾಸ್ತವದಲ್ಲಿ ಮುಚ್ಚಿಡುವ ಮೂಲಕ ಎಂತಹಾ ಜಾಗೃತ ಪೌರತ್ವವನ್ನು ಉತ್ತೇಜಿಸಲು ಸಾಧ್ಯ? ಹಾಗೆಯೇ, ಪ್ರಜಾಪ್ರಭುತ್ವದ ಪರಿಕಲ್ಪನೆ ಅಥವಾ ಪ್ರಜಾಪ್ರಭುತ್ವ ಮಾದರಿಯ ರಾಜಕೀಯ ವ್ಯವಸ್ಥೆಯ ಅಗತ್ಯತೆಯ ಕುರಿತು ಯಾವುದೇ ಕಲ್ಪನೆಯನ್ನು ಒದಗಿಸಿದೆ ಯುವಜನತೆಯನ್ನು ಆಧುನಿಕ ಕಾಲದ ಸವಾಲುಗಳಿಗೆ ತಯಾರಿಗೊಳಿಸಲು ಸಾಧ್ಯವಾಗುವುದಾದರೂ ಹೇಗೆ?

**ಪಶ್ಚಿಮದ ಬಗ್ಗೆ ಗ್ರಹಿಕೆ**

ಸರ್ಕಾರಿ ಶಾಲೆಗಳಲ್ಲಿ ಬೋಧಿಸಲಾಗುತ್ತಿರುವ ಸಮಾಜ/ಪಾಕಿಸ್ತಾನ ಅಧ್ಯಯನದ ಪಠ್ಯಕ್ರಮದಲ್ಲಿ ಮುಸ್ಲಿಂ ರಾಷ್ಟ್ರಗಳನ್ನು ಹೊರತುಪಡಿಸಿ ಅಂತರಾಷ್ಟ್ರೀಯ ಭೂಗೋಳ ಅಥವಾ ಇತಿಹಾಸವನ್ನು ಅಭ್ಯಸಿಸುವ ಯಾವುದೇ ಪ್ರಯತ್ನ ನಡೆದಿಲ್ಲ. ಧರ್ಮದ ಸಾಮ್ಯತೆಯನ್ನು ಹೊರತುಪಡಿಸಿ ಭೌಗೋಳಿಕ ಅಥವಾ ಹವಾಗುಣದೊಂದಿಗೆ ಯಾವ್ವದೇ ಸಂಬಂಧವಿಲ್ಲದಿರುವ ಇದು ಒಂದು ವಿಚಿತ್ರ ಗುಂಪುಗೂಡಾಗಿರುವುದರ ಅಧ್ಯಯನವಾಗಿದೆ. ಎಲ್ಲಾ ಇಸ್ಲಾಮಿಕ್ ರಾಜ್ಯಗಳೂ ಸಾಮ್ಯ ಆಸಕ್ತಿಗಳನ್ನು ಹೊಂದಿರುವ ಒಂದೇ ಗುಂಪಾಗಿ ರಚಿಸಲ್ಪಟ್ಟಿರುವುದರಿಂದ ಪರಸ್ಪರ ಸಹಕಾರದ ಅಗತ್ಯವಿದೆ ಎಂಬುದು ಇದರಲ್ಲಿ ಅಡಗಿರುವ(ಕೆಲವೆಡೆ ಸ್ಪಷ್ಟವಾಗಿ ಹೇಳಲಾದ) ಏಕೈಕ ಸಂದೇಶವಾಗಿದೆ. ಇದನ್ನು ಗಣ್ಯ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಬೋಧಿಸಲಾಗುವ ಪಠ್ಯಕ್ರಮದೊಂದಿಗೆ ಹೋಲಿಸಿದರೆ, ಅಲ್ಲಿ ಮಧ್ಯಕಾಲೀನ ಮತ್ತು ಆಧುನಿಕ ಪ್ರಪಂಚದ ಇತಿಹಾಸ ಹಾಗೂ ಅಂತರಾಷ್ಟ್ರೀಯ ಭೂಗೋಳವನ್ನು ಬೋಧಿಸಲಾಗುತ್ತಿದೆ. ಬಹುತೇಕ ಪಾಕಿಸ್ತಾನಿ ಮಕ್ಕಳಿಗೆ ಪಶ್ಚಿಮ ಎಂದರೆ ಹೊಸದಾಗಿ ಸೃಷ್ಟಿಯಾಗಿರುವ ಪಾಕಿಸ್ತಾನದ ಇರುವಿಕೆಯನ್ನು ಅಪಾಯಕ್ಕೆ ಸಿಲುಕಿಸಲು ಆಗಿರುವ ಹಿಂದೂ ಮತ್ತು ಇಂಗ್ಲಿಷರ ನಡುವಿನ 'ಅಪವಿತ್ರ ಮೈತ್ರಿ'. ಹಿಂದೂಗಳು ಎಂದರೆ ಇಸ್ಲಾಮಿನ ವಿರೋಧಿಗಳು ಎಂಬುದು ಉರ್ದು ಭಾಷಾ ಮತ್ತು ಸಮಾಜ ಅಧ್ಯಯನಗಳೆರಡರ ಪಠ್ಯಕ್ರಮಗಳಲ್ಲೂ ಮರುಕಳಿಸುತ್ತದೆ.

## ಸಾರಾಂಶ


ಒಟ್ಟಾರೆಯಾಗಿ ಹೇಳುವುದಾದರೆ, ಆಂಗ್ಲ ಮಾಧ್ಯಮ (ಬಹುತೇಕ ಖಾಸಗಿ) ಮತ್ತು ಉರ್ದು ಮಾಧ್ಯಮ (ಬಹುತೇಕ ಸರ್ಕಾರಿ) ಶಾಲೆಗಳೆರಡರಲ್ಲೂ ಬೋಧಿಸಲಾಗುತ್ತಿರುವ ಪಠ್ಯಕ್ರಮವು ಗಮನಾರ್ಹವಾದ ಪೂರ್ವಾಗ್ರಹಗಳು ಮತ್ತು ಲೋಪಗಳಿಂದ ಕೂಡಿದೆ ಎಂಬುದಂತೂ ಸ್ಪಷ್ಟ. ಅತಿ ಉನ್ನತ ಮೇಲ್ವರ್ಗದವರನ್ನು ಹೊರತುಪಡಿಸಿ, ಪಾಕಿಸ್ತಾನದಲ್ಲಿನ ಶಾಲಾ ಶಿಕ್ಷಣವು ನಮ್ಮ ಮುಂದಿನ ತಲೆಮಾರುಗಳಿಗೆ ವಿರೂಪಗೊಳಿಸಿದ ಗ್ರಹಿಕೆಗಳು ಮತ್ತು ಆದರ್ಶಗಳಿಂದ ಹೊರೆಯಾಗುತ್ತಿದೆ. ಮೊದಲನೆಯದಾಗಿ, ಪಾಕಿಸ್ತಾನ ಒಂದು ಇಸ್ಲಾಮೀಯ ಹಾಗು ಧರ್ಮ ಮತ್ತು ರಾಜಕೀಯವನ್ನು ಬೇರ್ಪಡಿಸಲಾಗದ ದೇಶವೆಂದು ಉರ್ದು ಮಾಧ್ಯಮ ಶಾಲಾ ವಿದ್ಯಾರ್ಥಿಗಳು ತಪ್ಪಾಗಿ ಗ್ರಹಿಸಬಹುದು. ಎರಡನೆಯದಾಗಿ, ವಿದ್ಯಾರ್ಥಿಗಳಿಗೆ ತಮ್ಮ ತಾಯಿನಾಡು ಪ್ರಾಂತ್ಯವನ್ನು ಬಿಟ್ಟರೆ ದೇಶದ ಇತರೆ ಭಾಗಗಳ ಭೂಗೋಳ, ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಸಮರ್ಪಕ ಜ್ಞಾನ ಇರುವುದು ಅಸಂಭವ. ಮೂರನೆಯದಾಗಿ, ಇನ್ನೂ ಹೆಚ್ಚು ದಾರಿತಪ್ಪಿಸುವ ಸಂಗತಿಯೆಂದರೆ, ಬೆರಳೆಣಿಕೆಯಷ್ಟಿರುವ ಮುಸ್ಲಿಂ ರಾಷ್ಟ್ರಗಳನ್ನು ಹೊರತುಪಡಿಸಿ ಪ್ರಪಂಚದ ಬಗ್ಗೆ ಬಹುತೇಕ ತಪ್ಪು ಗ್ರಹಿಕೆಗಳನ್ನು ಹೊಂದಿರುವುದು. ನಾಲ್ಕನೆಯದಾಗಿ, ಬಹುಶಃ ಅವರಿಗೆ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಹೆಚ್ಚು ನಂಬಿಕೆಯಿರುವುದು ಹಾಗೂ ಅದರ ಅಗತ್ಯತೆ ಮತ್ತು ವೈಶಿಷ್ಟ್ಯತೆಗಳನ್ನು ಅರ್ಥಮಾಡಿಕೊಳ್ಳುವುದು ಅಸಂಭವವಾಗಿದೆ.

ವಿದ್ಯಾರ್ಥಿಗಳು ಕಾಲೇಜು ಹಂತ ತಲುಪುವ ಮೊದಲೇ ಆಲೋಚಿಸುವ ಮತ್ತು ಅವಲೋಕಿಸುವ ಸಾಮರ್ಥ್ಯದಿಂದ ಗುರುತರವಾಗಿ ವಂಚಿತರಾಗಿರುತ್ತಾರೆ ಎಂದು ಊಹಿಸುವುದು ತಪ್ಪೇನಲ್ಲ. ಅವರ ಬೌದ್ಧಿಕ ಬೆಳವಣಿಗೆಯು ಕುಂಠಿತವಾಗಿ, ಆ ಕಾರಣದಿಂದ ಉನ್ನತ ಶಿಕ್ಷಣದ ಪ್ರಯೋಜನವನ್ನು ಪಡೆಯುವ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ. ಶಾಲಾ ಹಂತದಲ್ಲಿ ಇತಿಹಾಸ ಮತ್ತು ಸಮಾಜ ಅಧ್ಯಯನ ಕುರಿತಾದ ನೀತಿಬೋಧಕ ವಿಧಾನವು ಖಂಡಿತವಾಗಿಯೂ ಮಕ್ಕಳ ದೃಷ್ಟಿಕೋನಕ್ಕೆ ತಡೆಯೊಡ್ಡುತ್ತದೆ. ಮಕ್ಕಳ ಸುತ್ತಲೂ ಇರುವ ಪ್ರತಿಯೊಂದು ವಿಷಯವನ್ನು ಪವಿತ್ರವೆಂದು ಮುದ್ರೆಯೊತ್ತಿರುವುದರಿಂದ, ಯಾವುದೇ ರೀತಿಯ ಬದಲಾವಣೆ ಅಥವಾ ಸುಧಾರಣೆಯ ಬಗ್ಗೆ ವಸ್ತುನಿಷ್ಟವಾಗಿ ವಿಶ್ಲೇಷಿಸುವ ಯಾವುದೇ ಅವಕಾಶವಿಲ್ಲ. ಪಠ್ಯಕ್ರಮವು ಕನಿಷ್ಟ ಮಕ್ಕಳು ಸ್ವತಃ ತಾವೇ ಆಲೋಚಿಸಲು ಉತ್ತೇಜಿಸಿದರೆ ಪಾಕಿಸ್ತಾನಿ ಸಮಾಜದಲ್ಲಿರುವ

ಪ್ರಗತಿವಿರೋಧಿ ಮತ್ತು ಅಸಹಿಷ್ಣುತೆಯ ಭಾವಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾಗುವ ಸಾಧ್ಯತೆಯನ್ನು ಕಾಣಬಹುದು.

ಪ್ರಸ್ತುತ, ಈ ಪಠ್ಯಪುಸ್ತಕಗಳು ಭಯವನ್ನುಂಟು ಮಾಡುವ ಮತ್ತು ಹಲವು ಸಿದ್ಧಮಾದರಿಗಳನ್ನು ಬಲಪಡಿಸುವಂತಹ ಅಡಿಪಾಯವನ್ನು ಹೊಂದಿದ ಮಾನಸಿಕ ದೃಷ್ಟಿಕೋನವನ್ನು ಮಕ್ಕಳಲ್ಲಿ ಬಿತ್ತುತ್ತಿವೆ. ಎಲ್ಲವನ್ನೂ ನಿರುಪಾಧಿಕ (absolute- ಪ್ರಶ್ನಾತೀತ ಸತ್ಯ) ಎನ್ನುವ ದೃಷ್ಟಿಯಿಂದ ವಿಚಾರಮಾಡಲು ಮಕ್ಕಳನ್ನು ಉತ್ತೇಜಿಸುತ್ತವೆ; ಅಂದರೆ, ಪ್ರತಿಯೊಂದು ಸನ್ನಿವೇಶವನ್ನೂ ಸಂಪೂರ್ಣವಾಗಿ ಒಳ್ಳೆಯದ್ದು ಅಥವಾ ದುಷ್ಟತನದ ವಿಡಂಬನೆ ಎಂಬಂತೆ ಗ್ರಹಿಸುತ್ತಾರೆ. ಸ್ವಾಭಾವಿಕವಾದ ಮತ್ತು ಸಾಮಾನ್ಯವಾಗಿ ಐತಿಹಾಸಿಕವಾದ ಚಿಂತನೆಗಳು, ಸಂಸ್ಕೃತಿ ಅಥವಾ ನಂಬಿಕೆಗಳಿಗೆ ಸಂಬಂಧಿಸಿದಂತೆ ಭಿನ್ನತೆಗಳು ಇರುವುದು ಸಹಜ ಎನ್ನುವುದನ್ನು ಗುರುತಿಸುವುದರಲ್ಲಿ ಅವರ ಚಿಂತನಾಸ್ವರೂಪ ಸೋಲುತ್ತದೆ. ಇದಕ್ಕೆ ಬದಲಾಗಿ ಅವರು ತಮ್ಮ ನೆಚ್ಚಿನ ನಂಬಿಕೆ ಮತ್ತು 'ಸತ್ಯ'ದ ಅಂತಿಮ ವಿಜಯವನ್ನು ತಡೆಯಲು ಸದಾ ಪಿತೂರಿ ನಡೆಸುತ್ತಿರುವ "ಶತ್ರುಗಳ" ನಡುವಿನ ನಿರಂತರ ಸಂಘರ್ಷದ ಬಗ್ಗೆ ಭ್ರಮೆಗಳನ್ನು ಹೊಂದಿರುತ್ತಾರೆ. ಈ ಪ್ರಬಂಧವನ್ನು ಪ್ರಸಿದ್ಧ ಇತಿಹಾಸತಜ್ಞರಾದ ಕೆ.ಕೆ.ಅಜೀಜ್ (K K Aziz)ರವರ ಅಭಿಪ್ರಾಯದೊಂದಿಗೆ ಮುಗಿಸಲು ಬಯಸುತ್ತೇನೆ. ಅಜೀಜ್‌ರವರು ಹೇಳುವಂತೆ, "ಪ್ರಜಾಪ್ರಭುತ್ವದ ಸೋಲು, ಮಿಲಿಟರಿ ಸರ್ವಾಧಿಕಾರದ ದೀರ್ಘಾವಧಿ, ಭ್ರಷ್ಟಾಚಾರ, ನಿಯಮನಿಷ್ಠೆಯಿಲ್ಲದ ನೈತಿಕತೆ, ಹಾಳಾದ ವ್ಯಕ್ತಿತ್ವ, ನೈತಿಕ ಮೌಲ್ಯಗಳ ಕುಸಿತ, ಬೇಜವಾಬ್ದಾರಿತನದ ಭಾವನೆ, ಅಧಕ್ಷತೆ, ಸಿನಿಕತೆ, ಭವಿಷ್ಯದಲ್ಲಿ ನಮಗಾಗಿ ಏನಿದೆ ಎಂಬುದರ ಬಗ್ಗೆ ಉದಾಸೀನತೆ ಇವೆಲ್ಲವೂ ನಾವು ಯುವ ಮನಸುಗಳ ಬೆಳವಣಿಗೆಯಲ್ಲಿ ಬಳಸಿರುವ ಬೀಜಗಳ ಕಹಿ ಫಲ. ನಾವು ಏನು ಬಿತ್ತುತ್ತೇವೋ ಅದರ ಫಲವನ್ನು ಅನುಭವಿಸುತ್ತೇವೆ!!"

**ಅನುವಾದ:**
**ಪರಿಶೀಲನೆ:**

(ಮೂಲ: ದಿ ನ್ಯೂಸ್, ಭಾನುವಾರ ಅಕ್ಟೋಬರ್ 14, ೨೦೦೭ ರಂದು ಪ್ರಕಟಿಸಲಾತದೆ)